ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೋರಿದಂತೆ ಬಸ್ಸಿನ ಏರ್ಪಾಡು ಮಾಡಿಕೊಡುತ್ತೇನೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ನಗರದ ತುಂಗಾ ತೀರದಲ್ಲಿ 14- 15ನೇ ಶತಮಾನದ ಐತಿಹಾಸಿಕ ಭವ್ಯವಾದ ಮರದ ಅರಮನೆ ಇದೆ. ಕೆಳದಿ ಚೆನ್ನಮ್ಮಾಜ್ಜಿಯ ಇತಿಹಾಸ ಇರತಕ್ಕಂಥ ಶಿವಪ್ಪ ನಾಯಕನ ಅರಮನೆ ಕೂಡ ಅಲ್ಲಿದೆ. ಆ ಅರಮನೆಯ ಮೇಲ್ಛಾವಣಿ ಈಗಾಗಲೇ ಗೆದ್ದಲೂ ಹಿಡಿದಿರತಕ್ಕಂಥ ಸ್ಥಿತಿಗೆ ಬಂದಿದೆ. ಅರಮನೆಯ ಮೇಲ್ಛಾವಣಿಗೆ ಗೆದ್ದಲು ನಿರೋಧಕ ರಾಸಾಯನಿಕವನ್ನು ಸಿಂಪಡಿಸಿ ಅದಕ್ಕೊಂದು ಹೊಸ ರೂಪವನ್ನು ನೀಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೋರುತ್ತೇನೆ. ಅದೇ ರೀತಿಯಲ್ಲಿ ಶಿವಪ್ಪ ನಾಯಕನ ಅರಮನೆಯ ಮುಂಭಾಗ ಗಜಗಾತ್ರದ ಸಾಗುವಾನಿ ಕಂಬದ ಸಾಲುಗಳೂ ಕೂಡ ಬಿಸಿಲು, ಮಳೆಯಿಂದ ಹಾಳಾಗುತ್ತಿದೆ. ಅದನ್ನೂ ಕೂಡ ರಕ್ಷಣೆ ಮಾಡಬೇಕೆಂದು ಕೋರುತ್ತಿದ್ದೇನೆ. ಶಿವಪ್ಪ ನಾಯಕನ ಅರಮನೆಯ ಒಳಗಡೆ ಬೆಳಕಿಗಾಗಿ ವಿದ್ಯುತ್ ವೈರಿಂಗ್ ಕೂಡ ಮಾಡಿರುತ್ತಾರೆ. ಒಂದು ವೇಳೆ ವಿದ್ಯುತ್ ಸರ್ಕಿಟ್ ಹಾಳಾದರೆ ಇಡೀ ಮರದ ಅರಮನೆ ಹಾಳಾಗುವುದರಿಂದ ಅದಕ್ಕೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಸುಮಾರು 38 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ನಾವು ಖರ್ಚು ಮಾಡಿದ್ದೇವೆ. ಮಾನ್ಯ ಸದಸ್ಯರು ಅಲ್ಲಿ ಇನ್ನೂ ಕೆಲವೊಂದು ಕೆಲಸಗಳು ಆಗಬೇಕಾಗಿದೆ ಎಂದು ನಮ್ಮ ಗಮನ ಸೆಳೆದಿದ್ದಾರೆ. ನಾನು ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರ ಜೊತೆಗೂಡಿ ಆ ಸ್ಥಳವನ್ನು ಪರಿಶೀಲನೆ ಮಾಡಿ ಅಲ್ಲಿ ಇನ್ನೂ ಏನೇನು ಕೆಲಸಗಳು ಆಗಬೇಕಾಗಿದೆಯೋ ಅವುಗಳನ್ನು ಮಾಡಿಸಿಕೊಡುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಭರವಸೆ ನೀಡುತ್ತೇನೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಪ್ರತಿ ವರ್ಷ ಅಲ್ಲಿನ ಡೆವಲಪ್‌ಮೆಂಟ್‌ಗಾಗಿ ಹಣವನ್ನು ಕೊಡಬೇಕೆಂದು ನಾನು ಕೋರುತ್ತೇನೆ.

ಶ್ರೀ ಆರ್. ರೋಷನ್ ಬೇಗ್ : ಆ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 11ನೇ ಪಟ್ಟಿಯಲ್ಲಿರುವ 135 ಪ್ರಶ್ನೆಗಳ ಪೈಕಿ 100 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.